ಮಾತ್ರ ವಿಳಂಬವಾಗುವ ಸಾಧ್ಯತೆಗಳಿರುತ್ತವೆ. ಆದಾಗ್ಯೂ ಅನುಕಂಪದ ಆಧಾರದ ಮೇಲೆ ನೇಮಕಾತಿ ಮಾಡುವಾಗ ವಿಳಂಬವನ್ನು ತಪ್ಪಿಸಲು ಎಲ್ಲಾ ಇಲಾಖಾ ಮುಖ್ಯಸ್ಥರುಗಳಿಗೆ ಮತ್ತೊಮ್ಮೆ ಸೂಚನೆಗಳನ್ನು ನೀಡಲಾಗುವುದು.

ಮಾನ್ಯ ವಿರೋಧ ಪಕ್ಷದ ನಾಯಕರು ಶೂನ್ಯವೇಳೆಯಲ್ಲಿ ಏನು ಪ್ರಸ್ತಾಪ ಮಾಡಿದ್ದಾರೆ ಅದಕ್ಕೆ ಲಿಖಿತ ಮೂಲಕ ಉತ್ತರವನ್ನು ಒದಗಿಸಿದ್ದೇವೆ. ಟಿ. ನರಸೀಪುರದ ಶ್ರೀ ಜಿ.ಪಿ. ಮಂಜುನಾಥ್ ರವರ ವಿಶೇಷವಾದ ಪ್ರಕರಣವನ್ನು ಸದನದ ಗಮನಕ್ಕೆ ಪ್ರತಿ ಪಕ್ಷದ ನಾಯಕರು ತಂದಿದ್ದು, ಮೃತ ನೌಕರರ ಸಹೋದರರಾಗಿರುವುದರಿಂದ ಅವರಿಗೆ ನೌಕರಿ ಕೊಡುವುದುಕ್ಕೆ ಬರುವುದಿಲ್ಲವೆಂದು ಹಿಂಬರಹ ಕೊಟ್ಟಿದ್ದಾರೆಂದು ಹೇಳಿದ್ದಾರೆ. ತಾವು ಹೇಳಿದ ಹಾಗೆ ನಿಯಮಾವಳಿಗಳು ಸ್ಪಷ್ಟವಾಗಿದೆ. ಈ ವಿಶೇಷ ಪ್ರಸಂಗವನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತೇನೆ. ಸ್ಪಷ್ಟವಾಗಿ ಅಧಿಕಾರಿಗಳಿಗೆ ನಿರ್ದೇಶನ ಕೊಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ.

3. ವಿಷಯ: ಸಕಲೇಶಪುರ ತಾಲ್ಲೂಕಿನಲ್ಲಿ ಹೆಚ್ಚುತ್ತಿರುವ ಅನೆಗಳ ಹಾವಳಿಯನ್ನು ತಪ್ಪಿಸುವುದಕ್ಕೆ ಕ್ರಮ ಕೈಗೊಳ್ಳುವ ಬಗ್ಗೆ.

ಶ್ರೀ ಹೆಚ್.ಕೆ. ಕುಮಾರಸ್ವಾಮಿ (ಸಕಲೇಶಪುರ): ಮಾನ್ಯ ಅಧ್ಯಕ್ಷರೆ, ಈಗಾಗಲೇ ನನ್ನ ಮತಕ್ಷೇತ್ರವಾದ ಸಕಲೇಶಪುರ ತಾಲ್ಲೂಕಿನ ಕಾಡುಮನೆ ಎಸ್ಟೇಟ್‌ನಲ್ಲಿ ನೆನ್ನೆಯ ದಿವಸ ಮಹಿಳಾ ಕಾರ್ಮಿಕರು ಆನೆ ದಾಳಿಯಿಂದ ಸಾವಿಗೀಡಾಗಿದ್ದಾರೆ. ಇದು ಮಲೆನಾಡು ಭಾಗದಲ್ಲಿ ನಿರಂತರವಾಗಿ ನಡೆಯುತ್ತಿದೆ. ಇದರ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳಬೇಕೆಂದು ಹೇಳಿ, ಕೊನೆಗೆ ಅನೆಗಳ ಟಾಸ್ಕ್‌ಫೋರ್ಸ್ ಸಮಿತಿ ಮಾಡಿದ್ದು, ಈ ಸಮಿತಿ ನ್ಯಾಯಾಲಯಕ್ಕೆ ವರದಿಯನ್ನು ಕೊಟ್ಟಿದೆ. ಟಾಸ್ಕ್‌ಫೋರ್ಸ್ ಸಮಿತಿ

ಕೊಟ್ಟಿರುವ ವರದಿಯ ಆಧಾರದ ಮೇಲೆ ನ್ಯಾಯಾಲಯ ಸರ್ಕಾರದ ಅಭಿಪ್ರಾಯವನ್ನು ಕೇಳಿದೆ. ಒಂದು ಕಡೆ ಹನೂರು ತಾಲ್ಲೂಕಿನಲ್ಲಿ ಆನೆಗಳನ್ನು ಹಿಡಿಯಬೇಕೆಂದು ಹೇಳಿದೆ. ಸಕಲೇಶಪುರ ತಾಲ್ಲೂಕಿನಲ್ಲಿ ಆನೆಗಳ ಕಾರಿಡಾರ್ ಮಾಡುವ ಬಗ್ಗೆ ಕೂಡ ಅಭಿಪ್ರಾಯವನ್ನು ಹೇಳಿದೆ. ನಾಲ್ಕು ತಿಂಗಳುಗಳಾದರೂ ಸರ್ಕಾರ ಏಕೆ ಇಷ್ಟೊಂದು ವಿಳಂಬ ನೀತಿಯನ್ನು ಅನುಸರಿಸುತ್ತಿದೆ? ಇಷ್ಟೊಂದು ಉದಾಸೀನತೆಯನ್ನು ಏಕೆ ತೋರಿಸುತ್ತಿದೆ? ನಿರಂತರವಾಗಿ ಹತ್ಯೆ ನಡೆಯುತ್ತಿದೆ. ಈ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಂಡಿದೆ?

ಶ್ರೀ ಎಸ್. ಸುರೇಶ್‌ಕುಮಾರ್ (ಕಾನೂನು, ಮಾನವ ಹಕ್ಕು, ಸಂಸದೀಯ ವ್ಯವಹಾರ, ನಗರಾಭಿವೃದ್ಧಿ, ಬೆಂಗಳೂರು ಜಲಮಂಡಳಿ ಸಚಿವರು) (ಮಾನ್ಯ ಅರಣ್ಯ ಸಚಿವರ ಪರವಾಗಿ): ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಹೆಚ್.ಕೆ. ಕುಮಾರಸ್ವಾಮಿಯವರು ಸಕಲೇಶಪುರ ತಾಲ್ಲೂಕಿನ ಕಾಡುಮನೆ ಎಸ್ಟೇಟ್‌ನಲ್ಲಿ ಆನೆದಾಳಿಯಿಂದ ನಿನ್ನೆ ಬೆಳಿಗ್ಗೆ ಮಹಿಳೆಯೊಬ್ಬರು ಬಲಿಯಾಗಿದ್ದು, ಸರ್ಕಾರದ ಉದಾಸೀನ ವಿಳಂಬ ನೀತಿಯಿಂದ ಈ ದಾಳಿಗಳು ನಡೆಯುತ್ತಿದ್ದು, ಈ ಬಗ್ಗೆ ಮಾನ್ಯ ಅರಣ್ಯ ಸಚಿವರ ಗಮನ ಸೆಳೆಯುತ್ತಿದ್ದೇನೆ ಎಂದು ಹೇಳಿದ್ದಾರೆ. ಮುಂದುವರೆದು ಟಾಸ್ಕ್‌ಫೋರ್ಸ್ ಸಮಿತಿ ಒಂದು ವರದಿಯನ್ನು ಕೊಟ್ಟಿದ್ದು, ಇದಕ್ಕೆ ಸರ್ಕಾರದ ಉತ್ತರವನ್ನು ನ್ಯಾಯಾಲದ ನಾಲ್ಕು ತಿಂಗಳುಗಳಿಂದ ನಿರೀಕ್ಷೆ ಮಾಡುತ್ತಿದ್ದರೂ ಕೊಟ್ಟಿಲ್ಲವೆಂದು ಹೇಳಿದ್ದೀರಿ. ನಾನು ಕೂಡಲೆ ಇದನ್ನು ಮಾನ್ಯ ಅರಣ್ಯ ಸಚಿವರ ಗಮನಕ್ಕೆ ತಂದು ಟಾಸ್ಕ್‌ಫೋರ್ಸ್ ಸಮಿತಿಯ ವರದಿಗೆ ಸರ್ಕಾರದ ಉತ್ತರವನ್ನು ಶೀಘ್ರವಾಗಿ ನೀಡಿ, ಆನೆಗಳ ಹಾವಳಿಯನ್ನು ನಿಲ್ಲಿಸುವುದಕ್ಕೆ ಸರ್ಕಾರ ಗಂಭೀರವಾದ ಕ್ರಮ ತೆಗೆದುಕೊಳ್ಳುತ್ತದೆಯೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಅಧ್ಯಕ್ಷರು: ನೀವು implead ಆಗಿ. ನಮ್ಮ ಜಿಲ್ಲೆಯಿಂದ ನಾವು implead ಆಗಿದ್ದೇವೆ. ಶ್ರೀ ಹೆಚ್.ಕೆ. ಕುಮಾರಸ್ವಾಮಿ: ಇದು ನನ್ನ ಮತಕ್ಷೇತ್ರದಲ್ಲಿ ಮಾತ್ರವಲ್ಲ.

ಅಧ್ಯಕ್ಷರು: ನಾನು ಸಲಹೆ ಕೊಡುತ್ತಿದ್ದೇನೆ. ನೀವು impleading application ಹಾಕಿ. ನಮ್ಮ ಜಿಲ್ಲೆಯಿಂದ ಆಗಿದೆ. ನಿಮ್ಮ ಸಲಹೆಯನ್ನು ಕೊಡಿ. ಎಲ್ಲಾ ಸರ್ಕಾರ ಎಂದರೆ ಏನೂ ಆಗುವುದಿಲ್ಲ.

ಶ್ರೀ ಹೆಚ್.ಕೆ. ಕುಮಾರಸ್ವಾಮಿ: ಕೆಲವು ಘಟನೆಗಳನ್ನು ತಪ್ಪಿಸುವುದಕ್ಕೆ ಪ್ರಯತ್ನ ಮಾಡಲಿ. ಪ್ರತಿ ದಿನ ಇದೇ ರೀತಿ ಆಗುತ್ತಿದೆ.

ಅಧ್ಯಕ್ಷರು: ಅದಕ್ಕೆ ನೀವು High Court ನಲ್ಲಿ implead ಆಗಿ

ಶ್ರೀ ಹೆಚ್.ಕೆ. ಕುಮಾರಸ್ವಾಮಿ: ಮೊನ್ನೆ ಹನೂರು ತಾಲ್ಲೂಕಿನಲ್ಲಿ ಇದೇ ರೀತಿ ಆಗಿದೆ. ಸರ್ಕಾರ ಇದನ್ನು ಗಂಭೀರವಾಗಿ ಪರಿಗಣಿಸುವಂತೆ ಒತ್ತಾಯ ಮಾಡಬೇಕು.

ಅಧ್ಯಕ್ಷರು: ಆಯಿತು.

4. ವಿಷಯ: ಬಿಪಿಎಲ್ ಅಥವಾ ಎಪಿಎಲ್ ಕಾರ್ಡ್‌ಗಳನ್ನು ಪಡೆಯುವುದಕ್ಕೆ ಅರ್ಜಿಗಳನ್ನು ಸ್ವೀಕರಿಸುವ ಬಗ್ಗೆ.

ಶ್ರೀ ನೆ.ಲ.ನರೇಂದ್ರಬಾಬು (ಮಹಾಲಕ್ಷ್ಮಿ ಲೇಔಟ್): ಮಾನ್ಯ ಅಧ್ಯಕ್ಷರೆ, ಬಹಳಷ್ಟು ಜನ ಬಡ ಕುಟುಂಬ ವರ್ಗದವರು ಬಿ.ಪಿ.ಎಲ್. ಕಾರ್ಡ್‌ಗಳ ಅರ್ಹತೆಯಿದ್ದರೂ ಸಹ ಪಡೆಯಲಾಗದೆ, ಎ.ಪಿ.ಎಲ್. ಕಾರ್ಡ್‌ಗಳನ್ನು ಕೆಲವರು ಪಡೆದಿರುತ್ತಾರೆ. ಹಿಂದೆ ಇದೇ ಸದನದಲ್ಲಿ ಭರವಸೆ ಕೊಟ್ಟ ಹಾಗೆ ಅರ್ಜಿಗಳನ್ನು ಪಡೆಯುವುದಕ್ಕೆ ಅವಕಾಶ ಮಾಡಿಕೊಡುತ್ತೇವೆಂದು ಹೇಳಿದ್ದು ಇದುವರೆಗೂ ಸಹ ಬಿ.ಪಿ.ಎಲ್ ಆಗಲಿ, ಎ.ಪಿ.ಎಲ್. ಆಗಲಿ ಅರ್ಜಿಗಳನ್ನು ಪಡೆಯುವುದನ್ನು ನಿಲ್ಲಿಸಿದೆ. ಸರ್ಕಾರವೇಕೆ ಅರ್ಜಿ ಪಡೆಯುವುದನ್ನು ನಿಲ್ಲಿಸಿದೆ? ಅರ್ಜಿಗಳನ್ನು ಪಡೆಯುವುದಕ್ಕೆ ಯಾವಾಗ ಅವಕಾಶವನ್ನು ಕಲ್ಪಿಸಿಕೊಡುತ್ತೀರಿ? ಬಡವರಿಗೆ ಬಿಪಿಎಲ್ ಕಾರ್ಡ್‌ಗಳನ್ನು ಯಾವಾಗ ಕಲ್ಪಿಸಿಕೊಡುತ್ತೀರೆಂಬ ಬಗ್ಗೆ ಉತ್ತರ ಕೊಡಬೇಕು.

ಶ್ರೀ ಡಿ.ಎನ್. ಜೀವರಾಜ್ (ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು): ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಸುಮಾರು 1.36 ಕೋಟಿ ಪಡಿತರ ಚೀಟಿಗಳು ಚಾಲ್ತಿಯಲ್ಲಿವೆ. ಅದರಲ್ಲಿ 88,29,714 ಬಿಪಿಎಲ್ ಕಾರ್ಡ್‌ಗಳು